‘ನೀನೊಬ್ಬ ಅಪ್ಪನಾ? ಇರೋ ಒಬ್ಬ ಮಗನನ್ನು ಸಾಕುವ ಯೋಗ್ಯತೆ ನಿನಗಿಲ್ಲವಾ?”

–ಹನ್ನೆರಡು ವರ್ಷದ ಹುಡುಗ ಮನೆಯಿಂದ ಹೊರಗೆ ನಿಂತು ಕೂಗುತ್ತಿದ್ದ. ಮಗನ ಮಾತಿಗೆ ಹೇಗೆ ಪ್ರತಿಕ್ರಿಯಿಸುವುದೆಂದು ತಿಳಿಯದೆ ಯುವ ದಂಪತಿ ದಿಗ್ಭ್ರಮೆಯಿಂದ ನಿಂತಿದ್ದರು. ಅಕ್ಕಪಕ್ಕದ ಮನೆಯ ಬಾಗಿಲು–ಕಿಟಕಿಗಳು ಒಂದೊಂದಾಗಿ ತೆರೆದುಕೊಳ್ಳತೊಡಗಿದವು. ಮಗನನ್ನು ಅನುನಯಿಸಿ ಒಳಗೆ ಕರೆದುಕೊಂಡು ಹೋಗುವ ಹೊತ್ತಿಗೆ ಅಪ್ಪ–ಅಮ್ಮ ಕಲಿತ ಬುದ್ಧಿಯನ್ನೆಲ್ಲ ಖರ್ಚು ಮಾಡಬೇಕಾಯಿತು.

ಒಬ್ಬನೇ ಮಗ ಚೆನ್ನಾಗಿ ಓದಲಿ, ಚಿಕ್ಕಂದಿನಿಂದಲೇ ಶಿಸ್ತುಬದ್ಧ ಜೀವನ ರೂಢಿಸಿಕೊಳ್ಳಲಿ ಎನ್ನುವುದು ಆ ಯುವಜೋಡಿಯ ಆಸೆ. ಅದಕ್ಕಾಗಿ ದುಬಾರಿ ಶುಲ್ಕ ತೆತ್ತು ಪ್ರತಿಷ್ಠಿತ ವಸತಿಶಾಲೆಗೆ ಮಗನನ್ನು ಸೇರಿಸಿದ್ದರು. ರಜೆಯಲ್ಲಿ ಮನೆಗೆ ಬಂದಿದ್ದ ಮಗ ಮತ್ತೆ ವಸತಿಶಾಲೆಗೆ ಹೋಗುವುದಿಲ್ಲವೆಂದು ಪಟ್ಟುಹಿಡಿದಿದ್ದ. ಹಾಸ್ಟೆಲ್ ವಾಸ ಅವನಿಗೆ ತಲೆ ಚಿಟ್ಟುಹಿಡಿಸಿತ್ತು. ಅಪ್ಪ–ಅಮ್ಮನೊಂದಿಗೆ ಇರಬೇಕು ಎನ್ನುವ ಆಸೆ ಹುಡುಗನದು.

ಇನ್ನೊಂದು ಉದಾಹರಣೆ ನೋಡಿ. ಆರ್ಥಿಕವಾಗಿ ಹಿಂದುಳಿದ ಕುಟುಂಬಕ್ಕೆ ಸೇರಿದ ಹುಡುಗಿಯೊಬ್ಬಳು ಪಿಯುಸಿಯಲ್ಲಿ ನೂರಕ್ಕೆ ತೊಂಬತ್ತೈದರಷ್ಟು ಅಂಕ ತೆಗೆದಿದ್ದಾಳೆ. ಆಕೆಗೆ ವೈದ್ಯಕೀಯ ಶಿಕ್ಷಣದ ಸೀಟ್ ಕೂಡ ದೊರೆತಿದೆ. ಪಿಯುಸಿಯಲ್ಲಿ ಹಾಸ್ಟೆಲ್‌ನಲ್ಲಿ ಇದ್ದುಕೊಂಡೇ ಓದಿದ ಆ ಹುಡುಗಿ ಈಗಲೂ ಹಾಸ್ಟೆಲ್ ಅನ್ನೇ ಅವಲಂಬಿಸಿದ್ದಾಳೆ. ದೂರದ ಊರಿನ ಹಾಸ್ಟೆಲ್ ಬಗ್ಗೆ ಆಕೆಗೆ ಆತಂಕವಿಲ್ಲ. ಹಾಗೆ ನೋಡಿದರೆ ಹಾಸ್ಟೆಲ್‌ನಲ್ಲಿ ಲಭ್ಯವಿರುವ ಅನೇಕ ಸವಲತ್ತುಗಳು ಆಕೆಗೆ ಮನೆಯಲ್ಲಿಯೇ ಲಭ್ಯವಿಲ್ಲ. ಹಾಸ್ಟೆಲ್ ಜೀವನ ಆಕೆಯ ಬದುಕನ್ನು ಗಟ್ಟಿಗೊಳಿಸಿದೆ, ಜೀವನವನ್ನು ನೋಡುವ ದೃಷ್ಟಿಕೋನವನ್ನೂ ಬದಲಿಸಿದೆ. ಆಕೆಯ ಪ್ರಕಾರ, ‘ವಿದ್ಯಾರ್ಥಿ ನಿಲಯ ಎನ್ನುವುದು ಒಂದು ಬಗೆಯ ಅನುಭವ ಮಂಟಪ’. ಹಾಸ್ಟೆಲ್ ಎನ್ನುವುದು ಕೆಲವರ ಪಾಲಿಗೆ ಭಯ; ಮತ್ತೆ ಕೆಲವರಿಗೆ ಭರವಸೆ.

ಸಿಇಟಿ ಕೌನ್ಸೆಲಿಂಗ್ ಮುಗಿದು ಕಾಲೇಜುಗಳ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳ ಕಲರವ ತುಂಬಿಕೊಳ್ಳುತ್ತಿದೆ. ಎಂಜಿನಿಯರ್, ವೈದ್ಯರಾಗುವ ಕನಸು ಕಟ್ಟಿಕೊಂಡು ಸಾವಿರಾರು ವಿದ್ಯಾರ್ಥಿಗಳು ಕಾಲೇಜು ಪ್ರವೇಶಿಸುತ್ತಿದ್ದಾರೆ. ಇವರಲ್ಲಿ ಅನೇಕರು ಇದೇ ಮೊದಲ ಬಾರಿಗೆ ಕುಟುಂಬವನ್ನು ಅಗಲಿ ಬೇರೆ ಊರುಗಳಿಗೆ ಬಂದಿದ್ದಾರೆ. ಹಾಸ್ಟೆಲ್‌ಗಳಲ್ಲಿ ನೆಲೆಸಿ ಸ್ವತಂತ್ರ ಬದುಕಿನ ಪ್ರಯೋಗಕ್ಕೆ ತಮ್ಮನ್ನೊಡ್ಡಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ಮಾತ್ರವಲ್ಲ – ಪೋಷಕರಿಗೂ ಇದು ಹೊಸ ಅನುಭವ. ಮಕ್ಕಳನ್ನು ಹಾಸ್ಟೆಲ್‌ಗೆ ಸೇರಿಸಿದ್ದೇನೋ ಆಯಿತು. ಅವರು ಅಲ್ಲಿ ಹೇಗಿದ್ದಾರೋ ಏನೋ ಎನ್ನುವ ಕಳವಳ. ‘ಮಕ್ಕಳು ಒಂಟಿಯಾಗಿದ್ದಾರೆ’ ಎಂದು ಯೋಚಿಸುತ್ತಾ ಯೋಚಿಸುತ್ತಾ ಪೋಷಕರೇ ಒಂಟಿತನ ಅನುಭವಿಸುವ ಸಂದರ್ಭವಿದು.

ಮಗ/ಮಗಳು ಇದೇ ಮೊದಲ ಬಾರಿಗೆ ಕುಟುಂಬದಿಂದ ದೂರವಿರುವುದಷ್ಟೇ ಪೋಷಕರ ಕಳವಳಕ್ಕೆ ಕಾರಣವಲ್ಲ. ಆಗಾಗ್ಗೆ ವರದಿಯಾಗುವ, ಹಾಸ್ಟೆಲ್‌ಗಳಲ್ಲಿ ನಡೆಯುವ ಅಹಿತಕರ ಘಟನೆಗಳು ಯಾರಲ್ಲಾದರೂ ಆತಂಕವನ್ನು ಉಂಟು ಮಾಡಲೇಬೇಕು. ಉದಾಹರಣೆ ನೋಡಿ: ಕರಾವಳಿಯ ಮೂಡಬಿದರೆಯಲ್ಲಿ ಕಾವ್ಯಾ ಎನ್ನುವ ವಿದ್ಯಾರ್ಥಿನಿ ಹಾಸ್ಟೆಲ್‌ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆಕೆಯ ಸಾವಿನ ಕಾರಣ ನಿಗೂಢವಾಗಿಯೇ ಇದೆ. ಬೆಂಗಳೂರಿನ ಎಂಟೆಕ್ ವಿದ್ಯಾರ್ಥಿಯೊಬ್ಬ ಹಾಸ್ಟೆಲ್ ಕಟ್ಟಡದಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ರಾಯಚೂರು ಸಮೀಪದ ವಸತಿಶಾಲೆಯೊಂದರಲ್ಲಿ ನಿಜಾನಂದ ಎನ್ನುವ ವಿದ್ಯಾರ್ಥಿ ಬೆನ್ನುಹುರಿ ಘಾಸಿಗೊಳ್ಳುವಂತೆ ಶಿಕ್ಷಕರಿಂದ ಪೆಟ್ಟು ತಿಂದು ಆಸ್ಪತ್ರೆ ಸೇರಿದ್ದಾನೆ. ಐದು ತಿಂಗಳ ಹಿಂದೆ (ಮಾರ್ಚ್ 9) ತುಮಕೂರು ಜಿಲ್ಲೆಯ ಹುಳಿಯಾರಿನ ವಿದ್ಯಾವಾರಿಧಿ ಇಂಟರ್‌ನ್ಯಾಷನಲ್ ವಸತಿಶಾಲೆಯಲ್ಲಿ ವಿಷಾಹಾರ ಸೇವಿಸಿ ಮೂವರು ಮಕ್ಕಳು ಸಾವಿಗೀಡಾಗಿದ್ದರು. ಈ ಪ್ರಕರಣದಲ್ಲಿ ಊಟಕ್ಕೆ ಉದ್ದೇಶಪೂರ್ವಕವಾಗಿ ವಿಷ ಸೇರಿಸಲಾಗಿತ್ತು ಎನ್ನುವ ಶಂಕೆಯಿದೆ. ಇಂಥ ಸುದ್ದಿಗಳನ್ನು ಕೇಳಿದ ಮೇಲೆ, ಹಾಸ್ಟೆಲ್‌ಗಳಿಗೆ ಮಕ್ಕಳನ್ನು ಕಳುಹಿಸುವ ಪೋಷಕರ ಹೃದಯಬಡಿತದ ಲಯ ಏರುಪೇರಾಗದೆ ಇದ್ದೀತೆ?

ಹಾಸ್ಟೆಲ್ ಬಗ್ಗೆ ನೂರೆಂಟು ದೂರುಗಳಿವೆ, ನಿಜ. ಮಕ್ಕಳ ಸುರಕ್ಷತೆಯ ಬಗ್ಗೆ ಅನುಮಾನಗಳಿರುವುದೂ ನಿಜ. ಆದರೂ ಹಾಸ್ಟೆಲ್‌ಗಳನ್ನು ಬೇಡ ಎನ್ನುವಂತಿಲ್ಲ. ಇತಿಹಾಸದುದ್ದಕ್ಕೂ ವಿದ್ಯಾರ್ಥಿ ನಿಲಯಗಳು ನಮ್ಮ ಶಿಕ್ಷಣ ವ್ಯವಸ್ಥೆಯ ಭಾಗವಾಗಿವೆ. ವಿದ್ಯೆಯನ್ನು ಕಲಿಯುವ ಹಂಬಲದಿಂದ ದೂರದ ಊರುಗಳಲ್ಲಿನ ವಿದ್ಯಾಸಂಸ್ಥೆಗಳಿಗೆ ಬರುವ ಮಕ್ಕಳಿಗೆ ‘ಸಾಮಾಜಿಕ ಜವಾಬ್ದಾರಿ’ ರೂಪದಲ್ಲಿ ವಸತಿನಿಲಯಗಳನ್ನು



## ಹೆರಿಗೆ ಬಾಣಂತನ

ಓದು–ಅಧ್ಯಯನದ ಯಾಂತ್ರಿಕ ಜೀವನಕ್ಕೆ ಹೆಸರಾದ ಹಾಸ್ಟೆಲ್‌ಗಳು ಅಪರೂಪಕ್ಕೆ ಮಾನವೀಯ ಕ್ಷಣಗಳಿಗೂ ಸಾಕ್ಷಿಯಾಗುತ್ತವೆ. ಮಂಗಳೂರು ವಿಶ್ವವಿದ್ಯಾಲಯದಲ್ಲಿ ವಿದೇಶಿ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ವಸತಿನಿಲಯವಿದೆ. ಎಂ.ಎಸ್ಸಿ ಓದಲಿಕ್ಕೆಂದು ಬಂದು ಈ ವಸತಿನಿಲಯದಲ್ಲಿ ತಂಗಿದ್ದ ಪೂರ್ವ ಆಫ್ರಿಕಾದ ಬುರುಂಡಿ ದೇಶದ ವಿದ್ಯಾರ್ಥಿನಿ ಮುಗಿಶಾ ಅವರ ಹೆರಿಗೆ ಮತ್ತು ಬಾಣಂತನಕ್ಕೆ ಹಾಸ್ಟೆಲ್ ಸಿಬ್ಬಂದಿ ಸಾಕ್ಷಿಯಾಗಿದ್ದರು. ದ್ವಿತೀಯ ವರ್ಷದ ಓದಿನ ಸಂದರ್ಭದಲ್ಲಿ (2016ರಲ್ಲಿ) ಹೆರಿಗೆಯಾಗಿತ್ತು. ಮಗಳ ಓದು ಮತ್ತು ಬಾಣಂತನಕ್ಕೆ ನೆರವಾಗಲು ಮುಗಿಶಾ ಅವರ ಅಮ್ಮನೂ ಮಂಗಳೂರಿಗೆ ಬಂದಿದ್ದರು. ಘಟಿಕೋತ್ಸವ ಸಂದರ್ಭದಲ್ಲಿ ಮುಗಿಶಾ ತಮ್ಮ ಮಗ ದೇವ್ ಮಿಗೆಲ್ ಜೊತೆಗೆ ವೇದಿಕೆ ಏರಿದಾಗ ಸಭಾಂಗಣದಲ್ಲಿ ಚಪ್ಪಾಳೆಗಳು ಭೋರ್ಗರೆದಿದ್ದವು. ಆಫ್ಘಾನಿಸ್ತಾನದ ಮತ್ತೊಬ್ಬ ವಿದ್ಯಾರ್ಥಿನಿ ಕೂಡ ತಾವು ಗರ್ಭಿಣಿಯಾಗಿದ್ದಾಗಿ ಇಂಥದ್ದೇ ಮಮತೆಯನ್ನು ಮಂಗಳೂರಿನಲ್ಲಿ ಅನುಭವಿಸಿದ್ದರು.